ಹೊಸ ಬೆಟ್ಟು ಗ್ರಾಮ ಪಂಚಾಯ್ತಿಯಲ್ಲಿ ನೀರಿನ ಸಮಸ್ಯೆ

65 (308) ಶ್ರೀ ಅಭಯಚಂದ್ರ ಜೈನ್.ಕೆ. ಮೂಡಬಿದ್ರೆ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪುಚ್ಚಮೊಗರು ಗ್ರಾಮದಲ್ಲಿ ಹರಿಯುವ ನದಿಗೆ ಇರುವೈಲ್ ಗ್ರಾಮದಲ್ಲಿ ಕಿಂಡಿ ಅಣೆಕಟ್ಟು ನಿರ್ಮಿಸಿ, ಹೊಸಬೆಟ್ಟು ಗ್ರಾ ಪಂಚಾಯ್ತಿಗೆ ಕುಡಿಯುವ ನೀರನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿಲ್ಲದಿದ್ದಲ್ಲಿ, ಹೊಸಬೆಟ್ಟು ಗ್ರಾಮ ಪಂಚಾಯ್ತಿಯ ಜನತೆಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

(ಅ) ಹೌದು

(ಆ) ಪ್ರಸ್ತುತ, ಹೊಸಬೆಟ್ಟು ಗ್ರಾಮ ಪಂಚಾಯತ್ ಜನತೆಗೆ ಕೊಳವೆ ನೀರು ಸರಬರಾಜು, ಕಿರು ನೀರು ಸರಬರಾಜು, ಕೈಪಂಪು ಕೊಳವೆ ಬಾವಿ ಹಾಗೂ ತೆರೆದ ಬಾವಿಗಳಿಂದ ನೀರು ಪೂರೈಕೆ ಮಾಡಲಾಗುತ್ತಿದೆ.

ವಿಷಯ:–ರಾಜ್ಯದಲ್ಲಿ ಹೊಸ ಪಶು ಆಸ್ಪತ್ರೆ ಪ್ರಾರಂಭ

68 (403) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:

(ಅ) ರಾಜ್ಯದಲ್ಲಿ ಹೊಸ ಪಶು ಆಸ್ಪತ್ರೆಯನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

(ಆ) ಈ ವರ್ಷ ಒಟ್ಟು ಎಷ್ಟು ಪಶು ಆಸ್ಪತ್ರೆಯನ್ನು ಪ್ರಾರಂಭಿಸಲು ಉದ್ದೇಶಿಸಿದೆ; (ಸಂಪೂರ್ಣ ಜಿಲ್ಲವಾರು ಮಾಹಿತಿ ನೀಡುವದು)

(ಇ) ಹಾಗಿದ್ದಲ್ಲಿ, ರಾಜ್ಯದಲ್ಲಿನ ಒಟ್ಟು ಪಶು ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು; (ವ್ಯಂದಾವಾರು– ಜಿಲ್ಲಾವಾರು ವಿವರ ನೀಡುವುದು)

(ಈ) ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಎಷ್ಟು ಹುದ್ದೆಗಳು ಖಾಲಿ ಇವೆ; ಖಾಲಿ ಇದ್ದ ಪಶು ವೈದ್ಯಾಧಿಕಾರಿ ಹುದ್ದೆಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು;

(ಉ) ಹಾಗಿದ್ದಲ್ಲಿ, ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ರೇವೂ ನಾಯಕ್ ಬೆಳಮಗಿ : ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು.

(ಅ) ರಾಜ್ಯದ ಬಹಳಷ್ಟು ಪಶುಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಹಾಗೂ 770 ಪದವೀದರ ಪಶುವೈದ್ಯರ ಕೊರತೆ ಇರುವುದರಿಂದ ಹೊಸದಾಗಿ ಪಶುವೈದ್ಯಕೀಯ ಸಂಸ್ಥೆ ಗಳನ್ನು ತೆರೆಯುವ ಪ್ರಸ್ತಾವನೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

(ಆ) ಉದ್ಭವಿಸುವುದಿಲ್ಲ.

(ಇ) 2,392. ವೃಂದವಾರು –ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

(ಈ) ರಾಜ್ಯದಲ್ಲಿ 770 ಪಶುವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇದ್ದು ಸದರಿ ಹುದ್ದೆಗಳನ್ನು ಬಿ.ವಿ.ಎಸ್ಸಿ. & ಎ.ಹೆಚ್. ಪದವೀದರರಿಂದ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಅಥವಾ ವಿಶೇಷ ನೇಮಕಾತಿ ನಿಯಮಗಳ ಮುಖಾಂತರ ಭರ್ತಿ ಮಾಡಿಕೊಳ್ಳಲಗುವುದು.

(ಉ) ಪ್ರಸಕ್ತ ಸಾಲಿನಲ್ಲಿ 136 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇಮಕಾತಿ ನಿಯಮದಡಿ ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಅನುಬಂಧ –1

ಕ್ರಮ ಸಂಖ್ಯೆ	ಜಿಲ್ಲೆ	ಪಶುವೈದ್ಯಾಧಿಕಾರಿ ವೃಂದದ ಸಂಖ್ಯೆ
1	2	3
1	ಬೆಂಗಳೂರು ನಗರ ಜಿಲ್ಲೆ	99
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	44
3	ತುಮಕೂರು	129
4	ಚಿತ್ರದುರ್ಗ	66
5	ದಾವಣಗೆರೆ	83
6	ಕೋಲಾರ	69
7	ಶಿವಮೊಗ್ಗ	86
8	ಚಿಕ್ಕಬಳ್ಳಾಪುರ	59

9	ರಾಮನಗರ	59
10	ಮೈಸೂರು	91
11	ಚಾಮರಾಜನಗರ	40
12	ದಕ್ಷಿಣ ಕನ್ನಡ	50
13	ಉಡುಪಿ	42
14	ಹಾಸನ	102
15	ಚಿಕ್ಕಮಗಳೂರು	83
16	ಮಂಡ್ಯ	113
17	ಕೊಡಗು	36
18	ಬೆಳಗಾವಿ	178
19	ಬಿಜಾಪುರ	69
20	ಬಾಗಲಕೋಟೆ	83
21	ಧಾರವಾಡ	63
22	ಗದಗ್	67
23	ಹಾವೇರಿ	79
24	ಉತ್ತರ ಕನ್ನಡ	96
25	ಗುಲ್ಬರ್ಗಾ	132
26	ಯಾದಗಿರಿ	45
27	ಬಳ್ಳಾರಿ	102
28	ಬೀದರ್	92
29	ರಾಯಚೂರು	74
30	ಕೊಪ್ಪಳ	61
	ಒಟ್ಟು	**2392**

ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ರಸ್ತೆ ಅಭಿವೃದ್ಧಿ

74 (387) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–